# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 36362-2011

| | |
|---|---|
| **ಸಾಕ್ಷಿದಾರರ ಹೆಸರು** | **ಕೆ.ಎಸ್. ಕಟ್ಟಿ** |
| **ತಂದೆಯ ಹೆಸರು** | **ಶಿವರಾಮ ಕಟ್ಟಿ** |
| **ವಯಸ್ಸು** | **73 ವರ್ಷ** |
| **ಉದ್ಯೋಗ** | **ನಿವೃತ್ತಿ** |
| **ವಾಸ** | **ಹುಕ್ಕೇರಿ, ಬೆಳಗಾವಿ.** |
| **ಪ್ರಮಾಣೀಕರಿಸಿದ ದಿನಾಂಕ** | **06/07/2023** |

**ದಂ.ಪ್ರ.ಸಂ. ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ**

ನಾನು 1976 ರಿಂದ 2002 ಖಾಧಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಸೇವೆ ಸಲ್ಲಿಸಿದ್ದೇನೆ. ಆರೋಪಿತರು ನಮ್ಮ ಮಂಡಳಿಗೆ ಯಂತ್ರಗಳನ್ನು ಪೂರೈಸುವ ಏಜೆಂಟ್ ಆಗಿದ್ದರು. ಯಂತೋಪಕರಣಗಳನ್ನು ಪೂರೈಸುವ ಸಲುವಾಗಿ ನಮ್ಮ ಮಂಡಳಿಯವರು ಆರೋಪಿತರಿಗೆ ರೂ.93,000/- ಮೊತ್ತದ ಚೆಕ್ ನ್ನು ನೀಡಿದ್ದರು. ಆರೋಪಿತರು ಚೆಕ್ ನ್ನು ಸ್ವೀಕರಿಸಿದರೂ ಸಹ ಯಂತ್ರಗಳನ್ನು ಪೂರೈಸಿರುವುದಿಲ್ಲ. ನಾವು ಕೊಟ್ಟಿರುವ ಚೆಕ್ ನ್ನು ಆರೋಪಿತರು ತಮ್ಮ ಸಂಸ್ಥೆಯ ಹೆಸರಿನಲ್ಲಿ ಬ್ಯಾಂಕ್ ಗೆ ಸಲ್ಲಿಸಿ ನಗದು ಪಡಿಸಿಕೊಂಡಿರುತ್ತಾರೆ. ಆರೋಪಿತರು ಯಂತ್ರೋಪಕರಣಗಳನ್ನು ಪೂರೈಸದೆ ಇದ್ದ ಕಾರಣ ನಾವು ಅವರಿಗೆ ನೋಟಿಸ್ ಕೊಟ್ಟಿದ್ದೇವು. ನೋಟಿಸ್ ನ್ನು ಸ್ವೀಕರಿಸಿದ್ದರೂ ಸಹ ಆರೋಪಿತರು ಯಂತ್ರೋಪಕರಣಗಳನ್ನು ಪೂರೈಸಿರುವುದಿಲ್ಲ. ಆರೋಪಿತರು ನಮ್ಮ ಸಂಸ್ಥೆಗೆ ಮೋಸ ಮಾಡಿರುವುದರಿಂದ ನಾನು ಹೈ ಗ್ರೌಂಡ್ಸ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಸಾಕ್ಷಿಯು ಫಿರ್ಯಾದುವಿನ ನಕಲಿನಲ್ಲಿರುವ ತಮ್ಮ ಸಹಿಯನ್ನು

ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಆರೋಪಿತರು ತಲೆಮರೆಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**